ಕರ್ನಾಟಕ ಸರ್ಕಾರ

ದ.ಕ. ಜಿಲ್ಲಾ ಪಂಚಾಯತ್

ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸೇವೆಗಳು,

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ, ಬಂಟ್ವಾಳ ತಾಲೂಕುದ.ಕ574211.

Email: mochc2009@gmail.com Phone No:08255-233332

ಸಂಖ್ಯೆ:NO:TH/BNT/5/2026-27 ದಿನಾಂಕ: 19-05-2026

## Manual ಟೆಂಡರ್/ದರಪಟ್ಟಿ ಪ್ರಕಟಣೆ

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿನ ಕ್ಷ-ಕಿರಣ ವಿಭಾಗಕ್ಕೆ ಮುಂದಿನ ಒಂದು ವರ್ಷದ ಅವಧಿಗೆ ಬೇಕಾಗಿರುವ ಕ್ಷ-ಕಿರಣ ಪ್ಯಾಜಿ ಫಿಲ್ಮ್ 10x8 ಪೂರೈಸಲು ಅರ್ಹ ಸಂಸ್ಥೆಗಳಿಂದ Manual ಟೆಂಡರ್/ ದರಪಟ್ಟಿ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು ಉಚಿತ ಟೆಂಡರ್ ನಮೂನೆಗಳಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯ ವೆಬ್‌ಸೈಟ್ https://www.dkhfw.in ತಂತ್ರಾಂಶದಲ್ಲಿ ನಮೂನೆಯನ್ನು ಪಡೆದು ಭರ್ತಿಗೊಳಿಸಿದ Manual ಟೆಂಡರ್/ ದರಪಟ್ಟಿ ನಮೂನೆಯನ್ನು Technical Documentನಲ್ಲಿ ತಿಳಿಸಲಾದ ಎಲ್ಲಾ ದಾಖಲೆಗಳ ಪ್ರತಿಯೊಂದಿಗೆ The Member Secretary Arogya Raksha Samithi ಹಾಗೂ Administrative Medical Officer, Taluk Hospital Bantwal (ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಆಡಳಿತ ವೈದ್ಯಾಧಿಕಾರಿ ತಾಲೂಕು ಆಸ್ಪತ್ರೆ ಬಂಟ್ವಾಳ) ಇವರ ಹೆಸರಿನಲ್ಲಿ ಮೊಹರಾದ ಲಕೋಟೆಯಲ್ಲಿಟ್ಟು ದಿನಾಂಕ:

29.05.2026 ರ ಅಪರಾಹ್ನ: 4.00 ಗಂಟೆಯೊಳಗಾಗಿ ಈ ಕಚೇರಿಗೆ ಸಲ್ಲಿಸತಕ್ಕದ್ದು, ದರಪಟ್ಟಿ ತೆರೆಯುವ ದಿನಾಂಕ: 30-05-2026 ಆಗಿದ್ದು, ಒಂದು ವೇಳೆ ಆ ದಿನ ಸರ್ಕಾರಿ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಸರ್ಕಾರಿ ಕೆಲಸದ ದಿನದಂದು ದರ ಪಟ್ಟಿ ತೆರೆಯಲಾಗುವುದು.

ಸದಸ್ಯ ಕಾರ್ಯದರ್ಶಿ
ಆರೋಗ್ಯರಕ್ಷಾ ಸಮಿತಿ ಹಾಗೂ
ಆಡಳಿತ ವೈದ್ಯಾಧಿಕಾರಿ
ತಾಲೂಕು ಸಾರ್ವಜನಿಕಆಸ್ಪತ್ರೆ
ಬಂಟ್ವಾಳ, ಬಂಟ್ವಾಳ ತಾಲೂಕು

# ಅನುಬಂಧ-1

## ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿನ ಕ್ಷ-ಕಿರಣ ವಿಭಾಗಗಳಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಪ್ಯಾಜಿ ಫಿಲ್ಮ್ ಪೂರೈಸಲು ನಿಬಂಧನೆಗಳು

1. ಅಂದಾಜು ವೆಚ್ಚ ಮೊತ್ತ ರೂ 2,00,000/-ಆಗಿರುತ್ತದೆ.
2. Manual ಟೆಂಡರ್/ ದರಪಟ್ಟಿ ಪರಿಶೀಲನೆಯ ಬಗ್ಗೆ ಮತ್ತು Manual ಟೆಂಡರ್/ ದರಪಟ್ಟಿ ಬಗ್ಗೆ ಇತರೇ ಯಾವುದೇ ದೂರುಗಳಿದ್ದಲ್ಲಿ ಸದರಿ ಪ್ರಕ್ರಿಯೆ ನಡೆದ 1 ವಾರದೊಳಗೆ ಮಾತ್ರವೇ ಮೇಲ್ಮನವಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಬೇಕು. ತದನಂತರ ಬಂದ ಯಾವುದೇ ಮನವಿಯನ್ನು ಪರಿಗಣಿಸಲಾಗುವುದಿಲ್ಲ.
3. ಸಂಸ್ಥೆಯವರು ಸೂಕ್ಷ್ಮವಾಗಿ Manual ಟೆಂಡರ್/ ದರಪಟ್ಟಿ ಸಲ್ಲಿಕೆ ಮಾಡಬೇಕು. ಯಾವುದೇ ತಪ್ಪುಗಳು ಸಂಭವಿಸಿದಲ್ಲಿ ಇಲಾಖೆಯು ಜವಾಬ್ದಾರಿ ಆಗಿರುವುದಿಲ್ಲ.
4. ಯಾವುದೇ ಸೂಚನೆಗಳನ್ನು ನೀಡದೇ Manual ಟೆಂಡರ್/ದರಪಟ್ಟಿಯನ್ನು ರದ್ದುಪಡಿಸಲು/ ಅಂಗೀಕರಿಸಲು/ತಿರಸ್ಕರಿಸುವ ಹಕ್ಕು ಇಲಾಖೆಗೆ ಇರುತ್ತದೆ.
5. Manual ಟೆಂಡರ್/ ದರಪಟ್ಟಿಯಲ್ಲಿ ನಮೂದಿಸುವ ದರವನ್ನು ಮಾತ್ರ ಪರಿಗಣಿಸಲಾಗುವುದು. ಆದುದರಿಂದ ಸಂಸ್ಥೆಯವರು ದರಗಳನ್ನು ಸೂಚಿಸುವಾಗ ಸಾಗಾಟದ ವೆಚ್ಚ, ತೆರಿಗೆ ದರಗಳನ್ನು ಸೇರಿಸಿ ನಮೂದಿಸಬೇಕು. ಇಲದಿದ್ದಲ್ಲಿ ಹಾಲಿ ಸೂಚಿಸಿರುವ ದರವು ಎಲ್ಲವೂ ಸೇರಿರುವುದಾಗಿ ಭಾವಿಸಲಾಗುವುದು.
6. ಯಶಸ್ವಿ ಸಂಸ್ಥೆಯು ಒಂದು ವರ್ಷದ ಅವಧಿಗೆ ಬೇಡಿಕೆಗೆ ಅನುಗುಣವಾಗಿ ನೀಡಲಾಗುವ ಪೂರೈಕೆ ಆದೇಶದಂತೆ ಬೇಕಾಗಿರುವ ಕ್ಷ-ಕಿರಣ ಪ್ಯಾಜಿ ಫಿಲ್ಮ್ ಪೂರೈಸುವ ನಿಬಂಧನೆಗೊಳಪಟ್ಟಿರುತ್ತದೆ.
7. ಸರಬರಾಜು ಆದೇಶ ನೀಡಿದ 15 ದಿನಗಳ ಒಳಗಾಗಿ Item ಗಳನ್ನು ಸರಬರಾಜು ಮಾಡತಕ್ಕದ್ದು
8. ಅನುದಾನ ಲಭ್ಯವಿದ್ದಲ್ಲಿ 15 ದಿನಗಳ ಒಳಗಾಗಿ ಪಾವತಿ ಮಾಡಲಾಗುವುದು. ಅಗತ್ಯ ಅನುದಾನ ಲಭ್ಯವಿಲ್ಲದಿದ್ದಲ್ಲಿ ಅನುದಾನ ಸ್ವೀಕೃತವಾದ ನಂತರ ಬಿಲ್ ಪಾವತಿ ಮಾಡುವ ಬಗ್ಗೆ ಸಂಸ್ಥೆಯ ಒಪ್ಪಿಗೆ ಇರತಕ್ಕದ್ದು.
9. ಕ್ಷ-ಕಿರಣ ಪ್ಯಾಜಿ ಫಿಲ್ಮ್‌ಗಳನ್ನು ತೃಪ್ತಿಕರವಾಗಿ ಸ್ವೀಕರಿಸಿದ ನಂತರವೆ ಖರೀದಿಸಿದ ಬಿಲ್‌ಗಳ ಮೊತ್ತವನ್ನು ಸಂಸ್ಥೆಗೆ ಪಾವತಿಸುವುದು ಹಾಗೂ ಯಾವ ಕಾರಣಕ್ಕೂ ಮುಂಗಡ ಹಣವನ್ನು ಪಾವತಿಸಲು ಸಾಧ್ಯವಿಲ್ಲ.
10. ರೆಸ್ಪಾನ್ಸಿವ್ ಟೆಂಡರ್‌ದಾರರು ನಮೂದಿಸಿದ ದರದಲ್ಲಿ ಇಬ್ಬರು ಅಥವಾ ಹೆಚ್ಚಿನವರು ಒಂದೇ ದರ ಸೂಚಿಸಿದಲ್ಲಿ ಸಮಾನ ಪ್ರಮಾಣದಲ್ಲಿ ಸರಬರಾಜು ಆದೇಶವನ್ನು ನೀಡಲಾಗುವುದು.
11. Manual ಟೆಂಡರ್/ದರಪಟ್ಟಿಯೊಂದಿಗೆ ಸಲ್ಲಿಸಿದ ಯಾವುದಾದರೂ ದಾಖಲೆಗಳ ಬಗ್ಗೆ ಅವಶ್ಯವೆನಿಸಿದಲ್ಲಿ ಪರಿಶೀಲನೆ ನಡೆಸಲಾಗುವುದು.
12. ಎಲ್ಲಾ ತೆರಿಗೆಗಳನ್ನು ಒಳಗೊಂಡಿರುವ ದರವನ್ನು ಅನುಬಂಧ (3)ರಂತೆ ನಮೂದಿಸುವುದು.
13. ಮೇಲೆ ತಿಳಿಸಿದ ನಿಬಂಧನೆಗಳ ಹೊರತಾಗಿಯೂ ಖರೀದಿ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

## ಅನುಬಂಧ-2

## (ಚೆಕ್‌ಲಿಸ್ಟ್)

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿಗೆ ಬೇಕಾದ ಕ್ಷ-ಕಿರಣ ಪ್ಯಾಜಿ ಫಿಲ್ಮ್ ಪೂರೈಸಲು ಸಲ್ಲಿಸಿರುವ ಅಡಕಗಳ ವಿವರ

Manual ಟೆಂಡರ್/ ದರಪಟ್ಟಿ ಅಧಿಸೂಚನೆ ಪ್ರಕಟಣೆ ಸಂಖ್ಯೆ: NO:TH/BNT/5/2026-27

ದಿನಾಂಕ: 19-05-2026

| | | |
|---|---|---|
| 1 | ಟೆಂಡರ್ ಫಾರ್ಮ-(ಟೆಂಡರ್‌ದಾರರ ಸಂಸ್ಥೆಯ ಹೆಸರು ಮತ್ತು ವಿಳಾಸದೊಂದಿಗೆ) | ಲಗತ್ತಿಸಿದೆ/ಲಗತ್ತಿಸಿಲ್ಲ |
| 2 | ಭಾಗವಹಿಸುವ ಸಂಸ್ಥೆಯ ಬ್ಯಾಂಕ್ ಖಾತೆಯ ವಿವರಗಳು | ಲಗತ್ತಿಸಿದೆ/ಲಗತ್ತಿಸಿಲ್ಲ |
| 3 | ಚೆಕ್‌ಲಿಸ್ಟ್ | ಲಗತ್ತಿಸಿದೆ/ಲಗತ್ತಿಸಿಲ್ಲ |
| 4 | ಭಾಗವಹಿಸುವ ಸಂಸ್ಥೆಯವರ ಮಾನ್ಯತೆ ಹೊಂದಿರುವ ಡ್ರಗ್ ಲೈಸನ್ಸ್ ಪ್ರತಿ | ಲಗತ್ತಿಸಿದೆ/ಲಗತ್ತಿಸಿಲ್ಲ |
| 5 | ಪಾನ್‌ಕಾರ್ಡ್ ವಿವರಗಳು (ಪ್ರತಿ ಲಗತ್ತಿಸಬೇಕು) | ಲಗತ್ತಿಸಿದೆ/ಲಗತ್ತಿಸಿಲ್ಲ |
| 6 | ಜಿ.ಎಸ್.ಟಿ ನೋಂದಣಿ ಪ್ರಮಾಣ ಪತ್ರ (ಪ್ರತಿ ಲಗತ್ತಿಸಬೇಕು) | ಲಗತ್ತಿಸಿದೆ/ಲಗತ್ತಿಸಿಲ್ಲ |
| 7 | ಬಿಡ್ ಮಾಡುವ ಐಟಂಗಳ ಉತ್ಪಾದಕ ಸಂಸ್ಥೆಯ ಹೆಸರಿನ ಪಟ್ಟಿ | ಲಗತ್ತಿಸಿದೆ/ಲಗತ್ತಿಸಿಲ್ಲ |

ಮೇಲ್ಕಾಣಿಸಿರುವ ಎಲ್ಲಾ ಮಾಹಿತಿಗಳು ವಾಸ್ತವವೆಂದು ಮತ್ತು ಸತ್ಯವೆಂದು ಘೋಷಿಸಿರುತ್ತೇನೆ.

ದಿನಾಂಕ:

ಸ್ಥಳ:

ಪೂರ್ಣ ಸಹಿ ಮತ್ತು ಮೊಹರು

## ಅನುಬಂಧ -3

## ಮಾದರಿ ಬಿಡ್ ನಮೂನೆ

## Firm`s Letterhead

Date:

To,

ಸದಸ್ಯ ಕಾರ್ಯದರ್ಶಿ
ಆರೋಗ್ಯ ರಕ್ಷಾ ಸಮಿತಿ ಹಾಗೂ
ಆಡಳಿತ ವೈದ್ಯಾಧಿಕಾರಿ
ತಾಲೂಕು ಸಾರ್ವಜನಿಕ ಆಸ್ಪತ್ರೆ
ಬಂಟ್ವಾಳ, ಬಂಟ್ವಾಳ ತಾಲೂಕು

ಮಾನ್ಯರೇ

ವಿಷಯ: ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿನ ಕ್ಷ-ಕಿರಣ ವಿಭಾಗಗಳಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಫ್ಯೂಜಿ ಫಿಲ್ಮ್‌ನ್ನು ಪೂರೈಸಲು ದರಪಟ್ಟಿ.

1. X-Ray Fuji films 10x8

Bidder Seal and Signature

## ಅನುಬಂಧ- 4

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿನ ಕ್ಷ-ಕಿರಣ ವಿಭಾಗಗಳಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಫ್ಯೂಜಿ ಫಿಲ್ಮ್ ಗಳ ಪಟ್ಟಿ

1. X-Ray Fuji films 10x8

ಕರ್ನಾಟಕ ಸರ್ಕಾರ

**ದ.ಕ. ಜಿಲ್ಲಾ ಪಂಚಾಯತ್**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**

**ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಬಂಟ್ವಾಳ ತಾಲೂಕು ದ.ಕ 574211.**

Email: mochc2009@gmail.com Phone No:08255-233332

ಸಂಖ್ಯೆ: NO:TH/BNT/5/2026-27 ದಿನಾಂಕ: 19-05-2026

ರಿಗೆ,

ಉಪ ನಿರ್ದೇಶಕರು,
ಇ-ಆಸ್ಪತ್ರೆ ಕಾರ್ಯಕ್ರಮ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಆಯುಕ್ತಾಲಯ
ಬೆಂಗಳೂರು

ಮಾನ್ಯರೇ,

ವಿಷಯ:- ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಪ್ಯಾಜಿ ಫಿಲ್ಮ್‌ಗಳನ್ನು ಪೂರೈಸಲು Manual ಟೆಂಡರ್/ ದರಪಟ್ಟಿ ಪ್ರಕಟಣೆಯನ್ನು ಆರೋಗ್ಯ ಇಲಾಖೆಯ ಜಾಲ ತಾಣದಲ್ಲಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು, ಆಕುಕ ಆಯುಕ್ತಾಲಯ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಮುಜಾಅ/ ಆಪ್ತ ಶಾಖೆ/25/23-24, ದಿ: 20-05-2024

★★★★★★★★★★★

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಪ್ಯಾಜಿ ಫಿಲ್ಮ್‌ಗಳನ್ನು ಪೂರೈಸಲು Manual ಟೆಂಡರ್/ ದರಪಟ್ಟಿ ಪ್ರಕಟಣೆಯನ್ನು ದ.ಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://www.dkhfw.in ರಲ್ಲಿ ಪ್ರಕಟಿಸಲಾಗಿದೆ. ಉಲ್ಲೇಖಿತ ಸುತ್ತೋಲೆಯಂತೆ ಈ ಪ್ರಕಟಣೆಯನ್ನು ಆರೋಗ್ಯ ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು ಕೋರಿದೆ.

"ವಂದನೆಗಳೊಂದಿಗೆ"

ತಮ್ಮ ನಂಬುಗೆಯ

ಸದಸ್ಯ ಕಾರ್ಯದರ್ಶಿ
ಆರೋಗ್ಯ ರಕ್ಷಾ ಸಮಿತಿ ಹಾಗೂ ಆಡಳಿತ ವೈದ್ಯಾಧಿಕಾರಿ
ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ.

ಕರ್ನಾಟಕ ಸರ್ಕಾರ
ದ.ಕ. ಜಿಲ್ಲಾ ಪಂಚಾಯಿತ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸೇವೆಗಳು,
ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಬಂಟ್ವಾಳ ತಾಲೂಕು ದ.ಕ 574211.
Email: mochc2009@gmail.com Phone No:08255-233332

ಸಂಖ್ಯೆ: NO:TH/BNT/5/2026-27 ದಿನಾಂಕ: 19-05-2026

ರಿಗೆ,

1. ಮಾನ್ಯ ಜಿಲ್ಲಾಧಿಕಾರಿಯವರ ಕಚೇರಿ ದಕ್ಷಿಣ ಕನ್ನಡ ಜಿಲ್ಲೆ,
2. ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಯವರು, ಜಿಲ್ಲಾ ಪಂಚಾಯಿತ್, ದ.ಕ ಜಿಲ್ಲೆ,
3. ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ದ.ಕ ಜಿಲ್ಲೆ

ಮಾನ್ಯರೇ,

ವಿಷಯ:- ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಪ್ಯೂಜಿ ಫಿಲ್ಮ್‌ಗಳನ್ನು ಪೂರೈಸಲು Manual ಟೆಂಡರ್/ ದರಪಟ್ಟಿ ಪ್ರಕಟಣೆಯನ್ನು ಜಿಲ್ಲಾ ಆರೋಗ್ಯ ಮತ್ತು ಕು.ಕ ಇಲಾಖೆಯ ವೆಬ್‌ಸೈಟ್ https://www.dkhfw.in ಪ್ರಕಟಿಸುವ ಬಗ್ಗೆ.

ಉಲ್ಲೇಖ:- ಮಾನ್ಯ ಆಯುಕ್ತರು, ಆ.ಕು.ಕ ಆಯುಕ್ತಾಲಯ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಮುಜಾಅ/ಆಪ್ತ ಶಾಖೆ/25/23-24, ದಿನಾಂಕ: 20-05-2024

******************

ತಾಲೂಕು ಸಾರ್ವಜನಿಕ ಆಸ್ಪತ್ರೆ ಬಂಟ್ವಾಳ ಇಲ್ಲಿಗೆ ಅಗತ್ಯವಾಗಿ ಬೇಕಾಗಿರುವ ಕ್ಷ-ಕಿರಣ ಪ್ಯೂಜಿ ಫಿಲ್ಮ್‌ಗಳನ್ನು ಪೂರೈಸಲು Manual ಟೆಂಡರ್/ ದರಪಟ್ಟಿ ಪ್ರಕಟಣೆಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://www.dkhfw.inರಲ್ಲಿ ಆಹ್ವಾನಿಸಲಾಗಿದೆ.

ಉಲ್ಲೇಖಿತ ಸುತ್ತೋಲೆಯಂತೆ ಈ ಪ್ರಕಟಣೆಯನ್ನು ತಮ್ಮ ಕಚೇರಿಯ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಕೋರಿದೆ.

"ವಂದನೆಗಳೊಂದಿಗೆ"

ತಮ್ಮ ನಂಬುಗೆಯ

ಸದಸ್ಯ ಕಾರ್ಯದರ್ಶಿ
ಆರೋಗ್ಯರಕ್ಷಾ ಸಮಿತಿ ಹಾಗೂ ಆಡಳಿತ ವೈದ್ಯಾಧಿಕಾರಿ
ತಾಲೂಕು ಸಾರ್ವಜನಿಕಆಸ್ಪತ್ರೆ ಬಂಟ್ವಾಳ,